under the law. ಹೀಗಾಗಿ ಈ ಕೇಸಿನಲ್ಲಿ ಬಡಜನರಿಗೆ ತೊಂದರೆಯಾಗಿದೆ, ಕಾನೂನು ಪರಿಪಾಲನೆ ಮಾಡದೇ ಇರತಕ್ಕ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಈಗಾಗಲೇ ಕೆಲವು ಎನ್‌ಕ್ರೋಚ್‌ಮೆಂಟ್ ಆಗಿದೆ ಎಂದು ನಾನೇ ಹೇಳಿದೆ. ಅದನ್ನು ಸರಿಪಡಿಸುವುದಕ್ಕೆ ಸ್ಪೆಷಲ್ ಡೆಪ್ಯುಟಿ ಕಮೀಷನರ್ ಅಥವಾ ಡೆಪ್ಯುಟಿ ಕಮೀಷನರ್ ರವರಿಂದ ಪೂರ್ತಿಯಾಗಿ ಎನ್‌ಕ್ವೈರಿ ಮಾಡಿಸಿ ಸರ್ವೇ ಕೂಡ ಮಾಡಿಸಬೇಕಾಗುತ್ತದೆ. ಯಾರು ಯಾರು ಕಲ್ಟಿವೇಟರ್ಸ್ ಸರ್ಕಾರಿ ಜಮೀನನ್ನು ಎಷ್ಟೆಷ್ಟು ಎನ್‌ಕ್ರೋಚ್ ಮಾಡಿದ್ದಾರೆ, ಎಷ್ಟು ಅವರ ವಶದಲ್ಲಿದೆ ಎಂಬುದನ್ನು ಎನ್‌ಕ್ವೈರಿ ಮಾಡಿ ತಿಳಿದುಕೊಂಡ ಮೇಲೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದು ಕೊಳ್ಳಬೇಕಾಗುತ್ತದೆ. ಯಾರ ಯಾರ ಕಾಲದಲ್ಲಿ ಏನಾಗಿದೆ ಎಂಬುದನ್ನು ಕೂಡ ನಾವು ನೋಡಬೇಕು. ೧೯೭೦ರಿಂದ ಹೇಳುತ್ತಿದ್ದೇನೆ. ಇದನ್ನು ಪೂರ್ತಿಯಾಗಿ ಎನ್‌ಕ್ವೈರಿ ಮಾಡಿಸಿ ಯಾವುದೇ ಅಧಿಕಾರಿ ತಪ್ಪಿತಸ್ಥರಾಗಿದ್ದರೆ ಕಾನೂನು ಪ್ರಕಾರ ಅವರಿಗೆ ಶಿಕ್ಷೆ ಕೊಡುತ್ತೇವೆ. ಆದರೆ ಇದನ್ನು ಪೂರ್ತಿಯಾಗಿ ಪರಿಶೀಲಿಸದೇ ಸುಮ್ಮನೆ ಹಾಗೆ ಮಾಡುತ್ತೇವೆ ಹೀಗೆ ಮಾಡುತ್ತೇವೆ ಎಂದು ಹೇಳುವುದು ಸರಿಯಲ್ಲ. ಆದ್ದರಿಂದ ಎಗ್ಸಾಮಿನ್ ಮಾಡಿಸಿ ಡೆಪ್ಯುಟಿ ಕಮೀಷನರ್‌ರವರಿಂದ ಪೂರ್ತಿಯಾಗಿ ಎನ್‌ಕ್ವೈರಿ ಮಾಡಿಸಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡುತ್ತೇವೆ. ಯಾವ ಬಡವರಿಗೆ ನ್ಯಾಯ ಕೊಡಬೇಕೋ ಅದನ್ನು ಕೊಡುತ್ತೇವೆ. ಬಡವರ ಹೆಸರಿನ ಮೇಲೆ ಏನು ಎನ್‌ಕ್ರೋಚ್ ಮಾಡಿದ್ದಾರೆ ಅಂಥಾದ್ದನ್ನು ಎಗ್ಸಾಮಿನ್ ಮಾಡಿಸಿ ಜಿಲ್ಲಾಧಿಕಾರಿಗಳಿಂದ ವರದಿ ಬಂದಮೇಲೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಅರ್ಜಿಗಳನ್ನು ಒಪ್ಪಿಸುವುದು

ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ)—ಮಾನ್ಯ ಅಧ್ಯಕ್ಷರೇ, ಮೈಸೂರಿನ ಸರ್ವೋದಯ ಕುಷ್ಠ ಕಲ್ಯಾಣ ಕಾರ್ಯಕರ್ತೆ ಸಂಬಂಧಪಟ್ಟ ಕುಂದುಕೊರತೆಗಳ ಅರ್ಜಿಯನ್ನು (ಸಂಘದ ಅಧ್ಯಕ್ಷರಾದ ಶ್ರೀ ಆರ್. ಎಸ್. ಮುರಳಿಯವರು ಸಹಿ ಮಾಡಿರುತ್ತಾರೆ) ಸಭೆಯ ಮುಂದೆ ಮಂಡಿಸುವುದಕ್ಕೆ ಇಚ್ಛೆ ಪಡುತ್ತೇನೆ.

ಅಧ್ಯಕ್ಷರು.—ಅರ್ಜಿ ಸಲ್ಲಿಸಲ್ಪಟ್ಟಿದೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಸನ್ಮಾನ್ಯ ಅಧ್ಯಕ್ಷರೇ, ನನ್ನ ಹೆಸರಿನ ಮುಂದೆ ನಮೂದಾಗಿರ ತಕ್ಕ ಹುಸೇನ್‌ಪುರ ಗ್ರಾಮಸ್ಥರು ಸಹಿ ಮಾಡಿರುವ ಮನವಿಯನ್ನು ಸಭೆಗೆ ಒಪ್ಪಿಸುವುದಕ್ಕೆ ಇಚ್ಛೆಪಡುತ್ತೇನೆ.

ಅಧ್ಯಕ್ಷರು.— ಅರ್ಜಿ ಸಲ್ಲಿಸಲ್ಪಟ್ಟಿದೆ.

REPRESENTATION BY MEMBERS

ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ)—ಸನ್ಮಾನ್ಯ ಅಧ್ಯಕ್ಷರೇ, ನಿನ್ನೆ ಇಂಡಿಯನ್ ಎಕ್ಸ್‌ಪ್ರೆಸ್ ನಲ್ಲಿ ಒಂದು ಹೇಳಿಕೆ ಪ್ರಕಟವಾಗಿದೆ.

ಅಧ್ಯಕ್ಷರು.—ಪೂರ ಪ್ರಸ್ತಾಪಕ್ಕೆ ಹೋಗುವುದು ಬೇಡ. ನಾನು ನೋಡಿದ್ದೇನೆ, ತಾವೂ ಒಂದು ಪತ್ರ ಬರೆದಿದ್ದೀರಿ. ಅದರ ಬಗ್ಗೆ ಸಭೆಯ ಕಲಾಪದಲ್ಲಿ.....

ಶ್ರೀ ಕೆ. ಹೆಚ್. ಹನುಮೇಗೌಡ.—ಈ ಸಭೆಯ ಸದಸ್ಯರ ಮೇಲೆ ಬೇಕು ಎಂದು ಮನಸ್ಸೇಚ್ಛೆಯಾಗಿ ಬರೆಯುವುದಕ್ಕೆ ಯಾರಿಗೂ ಅಧಿಕಾರ ಇಲ್ಲ. ಮನಸ್ಸಿಗೆ ಬಂದಹಾಗೆ ಸ್ಟೇಟ್‌ಮೆಂಟ್ ಕೊಟ್ಟರೆ ಪ್ರತಿಯೊಬ್ಬರಿಗೂ ಆತ್ಮಗೌರವ.....

ಅಧ್ಯಕ್ಷರು.—ಪತ್ರಿಕೆಯಲ್ಲಿ ಓದಿದಮೇಲೆ ನನಗೂ ಕೂಡ ಮನಸ್ಸಿಗೆ ಖೇದವಾಗಿದೆ. ತಮ್ಮ ಹೆಸರು ಅಲ್ಲಿ ಎಳೆಯಲ್ಪಟ್ಟಿದೆ. ಅದರ ಬಗ್ಗೆ ಸರಿಯೋ ತಪ್ಪೋ ಎಂಬ ನಿಲುವನ್ನು ತಾಳಬೇಕಾಗಿದೆ. ಅದನ್ನು ವಿಶದೀಕರಿಸಬೇಕಾಗಿದೆ. ಆದರೆ ಪರ್ಸನಲ್ ಎಕ್ಸ್‌ಪ್ಲನೇಷನ್ ಕೊಡುವುದಕ್ಕೆ ನಮ್ಮ ಕಾನೂನು ಪ್ರಕಾರ ಈ ಸಭೆಯಲ್ಲಿ ಅವಕಾಶ ಕೊಡುವುದಾದರೆ ಕಾನೂನು ಚೌಕಟ್ಟಿನಲ್ಲೇ ನೋಡಬೇಕಾಗುತ್ತದೆ. ಇಲ್ಲಿ ತಮ್ಮ ವಿಷಯ ಪ್ರಸ್ತಾಪವಾಗಿರುವುದರಿಂದ ಮತ್ತು ಇದು ಪತ್ರಿಕೆಯಲ್ಲಿ ಬಂದಿರುವುದರಿಂದ ಅದರ ಬಗ್ಗೆ ಹೇಗೆ ಏನು ಮಾಡಬೇಕು ಎಂಬುದನ್ನು ಅಭ್ಯಾಸಮಾಡಿ ನಾಳೆ ಅದರ ಬಗ್ಗೆ ವಿಚಾರ ಮಾಡಿ ಹೇಳುತ್ತೇನೆ.